# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ: 26.08.2019**

**ಬಿಬಿಎಂಪಿ ಜಪ್ತಿ ಮಾಡಿರುವ ಪ್ಲಾಸ್ಟಿಕ್ ಅನ್ನು ಬಿಐಎಎಲ್ ಸಂಸ್ಥೆಗೆ ಹಂಸ್ತಾರಿಸುವ ಬಗ್ಗೆ:**



ಬಿಐಎಎಲ್ ಸಂಸ್ಥೆ ವಿಮಾನ ನಿಲ್ದಾಣದ ಪಥ(ರನ್ ವೇ) ಹಾಗೂ ರಸ್ತೆಗಳಿಗೆ ಪ್ಲಾಸ್ಟಿಕ್ ಬಳಕೆ ಮಾಡಿ ರಸ್ತೆ ನಿರ್ಮಾಣ ಮಾಡಲು ಮುಂದಾಗಿದ್ದು, ಅದಕ್ಕೆ ಬಿಬಿಎಂಪಿ ಜಪ್ತಿ ಮಾಡಿರುವ 5 ಟನ್ ಪ್ಲಾಸ್ಟಿಕ್ ಅನ್ನು ಸೋಮವಾರ ಪೂಜ್ಯ ಮಹಾಪೌರರು ರವರು ಬಿಐಎಎಲ್ ಸಂಸ್ಥೆಗೆ ಹಸ್ತಾಂತರಿಸಿದರು. ಈ ವೇಳೆ ಮಾನ್ಯ ಉಪಮಹಾಪೌರರು, ಮಾನ್ಯ ಆಡಳಿತ ಹಾಗೂ ಜೆಡಿಎಸ್ ಪಕ್ಷದ ನಾಯಕರುಗಳು, ಮಾನ್ಯ ಆಯುಕ್ತರು, ವಿಶೇಷ ಆಯುಕ್ತರು(ಘನತ್ಯಾಜ್ಯ), ಪಾಲಿಕೆ ಇತರೆ ಅಧಿಕಾರಿಗಳು ಹಾಗೂ ಬಿಐಎಎಲ್ ಸಂಸ್ಥೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮ(ಬಿಐಎಎಲ್)ವು ವಿಮಾನ ನಿಲ್ದಾಣದ ಟರ್ಮಿನಲ್-2 ಹಾಗೂ ವಿಮಾನ ನಿಲ್ದಾಣದ ವಿವಿಧ ರಸ್ತೆಗಳಿಗೆ ಪ್ಲಾಸ್ಟಿಕ್ ಬಳಕೆ ಮಾಡಲು ಮುಂದಾಗಿದೆ. ಈ ಸಂಬಂಧ ಅಗತ್ಯ ಪ್ಲಾಸ್ಟಿಕ್ ಅನ್ನು ಬಿಬಿಎಂಪಿ ವತಿಯಿಂದ ಹಸ್ತಾಂತರಿಸಲಾಗುತ್ತಿದೆ ಎಂದು ಮಹಾಪೌರರು ತಿಳಿಸಿದರು.

ಬಿಐಎಎಲ್ ಸಂಸ್ಥೆಗೆ ಪ್ಲಾಸ್ಟಿಕ್ ಹಸ್ತಾಂತರಿಸುವ ಬಗ್ಗೆ ಮಾಹಿತಿ ನೀಡಿದ ಮಹಾಪೌರರು, ವಿಮಾನ ನಿಲ್ದಾಣದ ಪಥ ಸೇರಿದಂತೆ 50 ಕಿ.ಮೀ ರಸ್ತೆ ನಿರ್ಮಾಣ ಮಾಡಲು 50,000 ಕೆ.ಜಿ(50ಟನ್) ಪ್ಲಾಸ್ಟಿಕ್ ಅಗತ್ಯವಿದ್ದು, ಬಿಬಿಎಂಪಿ ಸಹಕಾರ ನೀಡಬೇಕು ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದ ಉಪಾಧ್ಯಕ್ಷರು ಆದ ವೆಂಕಟರಾಮನ್ ರವರು ಬಿಬಿಎಂಪಿಗೆ ಪತ್ರ ಬರೆದಿದ್ದರು. ಅದರಂತೆ ಇಂದು ಸಾಂಕೇತಿಕವಾಗಿ 5 ಟನ್ ಪ್ಲಾಸ್ಟಿಕ್ ಅನ್ನು ಬಿಇಐಎಲ್ ಸಂಸ್ಥೆಗೆ ಹಂಸ್ತಾಂತರ ಮಾಡಲಾಯಿತು. ಇನ್ನು ಅವಶ್ಯಕತೆಯಿರುವ ಪ್ಲಾಸ್ಟಿಕ್ ಅನ್ನು ಹಂತ ಹಂತವಾಗಿ ಹಸ್ತಾಂತರಿಸಲಾಗುವುದು ಎಂದು ಹೇಳಿದರು.

ಈ ಹಿಂದೆ ನಗರದ ರಸ್ತೆ ಗುಂಡಿಗಳನ್ನು ಪ್ಲಾಸ್ಟಿಕ್ ಬಳಕೆ ಮಾಡಿ ಮುಚ್ಚಲಾಗಿತ್ತು. ಇದೀಗ ಪ್ರಮುಖ ರಸ್ತೆಗಳನ್ನು ವೈಟ್ ಟಾಪಿಂಗ್ ಹಾಗೂ ಟೆಂಡರ್ ಶ್ಯೂರ್ ರಸ್ತೆಗಳನ್ನಾಗಿ ನಿರ್ಮಿಸಲಾಗುತ್ತಿದೆ. ಪ್ಲಾಸ್ಟಿಕ್ ಬಳಕೆ ಮಾಡಿ ಡಾಂಬರೀಕರಣ ಮಾಡಿದ ರಸ್ತೆಗಳು ಹೆಚ್ಚು ಬಾಳಿಕೆ ಬಂದರೆ, ಮುಂದಿನ ದಿನಗಳಲ್ಲಿ ಪಾಲಿಕೆಯ ರಸ್ತೆಗಳನ್ನೂ ಪ್ಲಾಸ್ಟಿಕ್ ಬಳಸಿ ಡಾಂಬರೀಕರಣ ಮಾಡಲಾಗುವುದು ಎಂದರು.

ಪಾಲಿಕೆ ಆಯುಕ್ತರು ಮಾತನಾಡಿ, ಬಿಐಎಎಲ್ ಸಂಸ್ಥೆ 50 ಕಿ.ಮೀ ರಸ್ತೆಗೆ ಶೇ. 7ರಿಂದ 8 ರಷ್ಟು ಪ್ಲಾಸ್ಟಿಕ್ ಬಳಕೆ ಮಾಡಿ ಡಾಂಬರೀಕರಣ ಮಾಡಲು ಮುಂದಾಗಿದೆ. ಅದರಂತೆ ಪಾಲಿಕೆ ಜಪ್ತಿ ಮಾಡಿರುವ ಪ್ಲಾಸ್ಟಿಕ್ ಅನ್ನು ಬಿಇಐಎಲ್ ಸಂಸ್ಥೆಗೆ ಉಚಿತವಾಗಿ ಹಸ್ತಾಂತರಿಸಲಾಗುತ್ತಿದೆ ಎಂದು ತಿಳಿಸಿದರು.

ನಗರದಲ್ಲಿ ಪ್ರತಿನಿತ್ಯ 5,800 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಅದರಲ್ಲಿ ಶೇ. 10 ರಿಂದ 15 ರಷ್ಟು(800 ಟನ್) ಪ್ಲಾಸ್ಟಿಕ್ ಉತ್ಪತ್ತಿ ಆಗುತ್ತಿದೆ. ಎಲ್ಲಾ ರೀತಿಯ ಪ್ಲಾಸ್ಟಿಕ್ ಉತ್ಪನ್ನಗಳನ್ನು ರಸ್ತೆ ನಿರ್ಮಾಣಕ್ಕೆ ಬಳಕೆ ಮಾಡಬಹುದು ಎಂದು ಬಿಇಐಎಲ್ ಸಂಸ್ಥೆಯವರು ತಿಳಿಸಿದ್ದಾರೆ. ಅದರಂತೆ ಇಂದು ಪಾಲಿಕೆಯಿಂದ ಜಪ್ತಿ ಮಾಡಿರುವ 5 ಟನ್ ಪ್ಲಾಸ್ಟಿಕ್ ಅನ್ನು ಸಾಂಕೇತಿಕವಾಗಿ ಹಂಸ್ತಾತರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅವಶ್ಯಕತೆ ಇರುವ ಪ್ಲಾಸ್ಟಿಕ್ ಅನ್ನು ಹಸ್ತಾಂತರಿಸಲು ಕ್ರಮ ವಹಿಸಲಾಗುವುದು ಎಂದರು.

ಪ್ಲಾಸ್ಟಿಕ್ ಬಳಕೆ ಮಾಡಿ ರಸ್ತೆ ನಿರ್ಮಾಣ ಮಾಡಿದರೆ ಹೆಚ್ಚು ಕಾಲ ಬಾಳಿಕೆ ಬರುತ್ತದೆ. ಬಿಐಎಎಲ್ ರಸ್ತೆ ನಿರ್ಮಾಣ ಮಾಡಿದ ಬಳಿಕ ಪಾಲಿಕೆ ಇಂಜಿನಿಯರ್‌ಗಳನ್ನು ಸ್ಥಳಕ್ಕೆ ಕಳುಹಿಸಿ ರಸ್ತೆ ಪರಿಶೀಲನೆ ಮಾಡಿ, ಪಾಲಿಕೆ ರಸ್ತೆಗಳನ್ನು ಅದೇ ರೀತಿ ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.



ಸಾರ್ವಜನಿಕ ಸಂಪರ್ಕಾಧಿಕಾರಿ